ಕ್ರಿಮಿನಲ್ ಮಿಸ್ ನಂಬ್ರಃ **42/2024** ಪಿಡಬ್ಲ್ಯ್ಯೂ-**1**

ದಿನಾಂಕಃ 21-08-2024 ರಂದು ಸಾಕ್ಷಿಯನ್ನು ಪುನಹ ಕರೆಸಿ ವಿಧಿಬದ್ಧವಾಗಿ ಪ್ರಮಾಣವಚನ ಭೋಧಿಸಲಾಯಿತು.

ಮಧ್ಯಂತರ ಅರ್ಜಿಯ ಆದೇಶದ ಮೇರೆಗೆ

ಪಾಟಿ ಸವಾಲುಃ ಎದುರುದಾರರ ಪರ ವಕೀಲರಾದ ಶ್ರೀ ಹೆಚ್. ಪಿ.ಎಚ್. ರವರಿಂದ

ನನ್ನ ಮತ್ತು ಎದುರುದಾರರ ಮದುವೆ ಧರ್ಮಸ್ಥಳದಲ್ಲಿ ಎಪ್ರಿಲ್ 27 ಕ್ಕೆ ನಡೆದಿರುತ್ತದೆ, ಆದರೆ ಇಸವಿ 2011 ಅಥವಾ 2012 ಇರಬಹುದು ನೆನಪಿಲ್ಲ. ಮದುವೆ ನಂತರ ನಾನು ಎದುರುದಾರರ ಮನೆ ಇರುವ ಬ್ರಹ್ಮಾವರದ ಚಿತ್ರಪಾಡಿಗೆ ಬಂದಿರುತ್ತೇನೆ ಎಂದರೆ ಸರಿ. ಮದುವೆ ನಂತರ ನಾನು ಗಂಡನ ಮನೆಯಲ್ಲಿ ವಾಸವಾಗಿದ್ದೆ. ಮದುವೆ ಆದ 15 ದಿನದ ನಂತರ ಎದುರುದಾರ ಮೈಸೂರಿಗೆ ಹೋಗಿದ್ದರು ಎಂದರೆ ಸರಿ. ಮೈಸೂರಿನಲ್ಲಿ ಎದುರುದಾರ ಅವರದೇ ಹೋಟೆಲ್ ನಡೆಸುತ್ತಿದ್ದರು. ಎದುರುದಾರ ಮೈಸೂರಿನಲ್ಲಿರುವ ಹೋಟೆಲ್ ತನ್ನದೇ ಎಂದು ಮದುವೆ ಮಾತುಕತೆ ಸಮಯದಲ್ಲಿ ಹೇಳಿದ್ದರು. ಮದುವೆ ಮಾತುಕತೆ ಎಲ್ಲಿ ಆಗಿದೆ ಎಂದು ನೆನಪಿಲ್ಲ. ಮದುವೆ ಮಾತುಕತೆ ಸಮಯದಲ್ಲಿ ನಮ್ಮ ಕಡೆಯಿಂದ ನನ್ನ ಅಮ್ಮ, ಚಿಕ್ಕಪ್ಪ ಮತ್ತು ಮಾವಂದಿರು ಇದ್ದರು, ಎದುರುದಾರರ ಕಡೆಯಿಂದ ಎದುರುದಾರ ಮತ್ತು ಅವರ ಅಕ್ಕ ಮತ್ತು ಮಾವ ಇದ್ದರು.

ನಾನು ಮರಾಠಿ ನಾಯಕ್ ಜಾತಿಗೆ ಸೇರಿದವಳು. ಎದುರುದಾರ ನಾಯರಿ ಜಾತಿಗೆ ಸೇರಿದವರು. ಮದುವೆ ಮಾತುಕತೆಗೆ ಸುರೇಂದ್ರ ಆಚಾರ್ ಎಂಬ ಬ್ರೋಕರ್ ಮಧ್ಯಸ್ಥಿಕೆದಾರರಾಗಿದ್ದರು. ಎದುರುದಾರ ಮದುವೆ 15 ದಿನದ ನಂತರ ಮೈಸೂರಿಗೆ ಹೋಗಿದ್ದು, ಅಗಸ್ಟ್ ತಿಂಗಳಲ್ಲಿ ವಾಪಾಸು ಬಂದಿದ್ದರು. ಎದುರುದಾರ ವಾಪಾಸು ಬಂದ ನಂತರ ಮತ್ತೇ ಪುನಃ ಮೈಸೂರಿಗೆ ಯಾವಾಗ ಹೋಗಿದ್ದರು ಎಂದು ನೆನಪಿಲ್ಲ. ಮದುವೆ ಆದ ನಂತರ ನಾನು ಹೆಚ್ಚಾಗಿ ತಾಯಿ ಮನೆಯಲ್ಲಿ ವಾಸವಾಗಿದ್ದೆ ಎಂದರೆ ಸಾಕ್ಷಿ ತಾನು ಗರ್ಭಿಣಿ ಆದ ನಂತರ ತಾಯಿ ಮನೆಗೆ ಹೋಗಿರುವುದಾಗಿ ನುಡಿದಿರುತ್ತಾರೆ. ಎದುರುದಾರ ನ್ಯಾಯಲಯಕ್ಕೆ ಸಲ್ಲಿಸಿರುವ ತಕರಾರಿನ ಬಗ್ಗೆ ಗೊತ್ತಿರುತ್ತದೆ, ಅದರಲ್ಲಿ ಏನು ಬರೆದಿದ್ದಾರೆ ಎಂದು ತಿಳಿದುಕೊಂಡಿರುತ್ತೇನೆ.

2 ನೇ ಅರ್ಜಿದಾರರು ಎದುರುದಾರರಿಗೆ ಜನಿಸಿದ ಮಗು ಅಲ್ಲ ಎಂದು ತಕರಾರಿನಲ್ಲಿ ಇದೆ ಎಂದು ತಿಳಿಸಿದ್ದಾರೆ ಎಂದರೆ ಸರಿ. ಈ ಅರ್ಜಿಯನ್ನು ಸಲ್ಲಿಸುವ ಮೊದಲು ಹಿರಿಯ ಸಿವಿಲ್ ನ್ಯಾಯಲಯದಲ್ಲಿ ವಿಚ್ಚೇದನಾ ಕೋರಿ ಅರ್ಜಿ ಸಲ್ಲಿಸಿದ್ದೇನೆ ಎಂದರೆ ಸರಿ. ನನಗೆ ಮನಸ್ಸಿಗೆ ಬೇಜಾರಾಗಿದ್ದರಿಂದ ನಾನು ವಿಚ್ಚೇದನಾ

ಕೋರಿ ಅರ್ಜಿ ಸಲ್ಲಿಸಿರುತ್ತೇನೆ. ನಂತರ ಆ ಕೇಸಿನಲ್ಲಿ ನಾನು ಬೇಡ ಎಂದು ಹಾಜರಾಗಿಲ್ಲ, ಆ ಕೇಸು ಏನಾಯಿತು ಎಂದು ನನಗೆ ಗೊತ್ತಿಲ್ಲ.

ಈ ಹಂತದಲ್ಲಿ ಎದುರುದಾರರ ಪರ ವಕೀಲರು ಮಧ್ಯಾಹ್ನ **3** ಗಂಟೆಗೆ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ ಮೇರೆಗೆ ಮಧ್ಯಾಹ್ನ **3** ಗಂಟೆಗೆ ಪಾಟೀ ಸವಾಲಿಗಾಗಿ ಮುಂದೂಡಲಾಯಿತು.

ಓದಿ ಹೇ. ಕೇ. ಸರಿ ಇದೆ. ನನ್ನ ಹೇ. ಮೇ. ಬೆ. ಮಾಡಲಾಗಿದೆ

2 ನೇ ಹೆಚ್ಚುವರಿ ಸಿವಿಲ್ ನ್ಯಾಯಾದೀಶರು
ಮತ್ತು ಜೆ.ಎಂ.ಎಫ್.ಸಿ. ಕುಂದಾಪುರ

ಕ್ರಿಮಿನಲ್ ಮಿಸ್ ನಂಬ್ರಃ **42/2024** ಪಿಡಬ್ಲ್ಯೂ-**1**

ದಿನಾಂಕಃ 21-08-2024 ರಂದು ಸಾಕ್ಷಿಯನ್ನು ಪುನಹ ಕರೆಸಿ ವಿಧಿಬದ್ಧವಾಗಿ ಪ್ರಮಾಣವಚನ ಭೋಧಿಸಲಾಯಿತು.

ಇನ್ ಕ್ಯಾಮೇರಾ ಮೂಲಕ ತೆಗೆದುಕೊಳ್ಳಲಾಯಿತು

ಮುಂದುವರಿದ ಪಾಟಿ ಸವಾಲುಃ ಎದುರುದಾರರ ಪರ ವಕೀಲರಾದ ಶ್ರೀ ಹೆಚ್. ಪಿ.ಎಚ್. ರವರಿಂದ

ಎದುರುದಾರರು ಮದುವೆ ಆದ 15 ದಿನದಲ್ಲಿ ಮೈಸೂರಿಗೆ ಹೋಗಿ ನಂತರ 4 ತಿಂಗಳ ನಂತರ ಬಂದಿರುತ್ತಾರೆ ಎಂದರೆ ಸಾಕ್ಷಿ ದೇವರ ಪೂಜೆಗೆಂದು ಎದುರುದಾರ ಬಂದಿದ್ದರು, ಆದರೆ ಯಾವ ತಿಂಗಳಲ್ಲಿ ಎಂದು ನೆನಪಿಲ್ಲ ಎಂದು ನುಡಿದಿರುತ್ತಾರೆ. ನಾನು ಯಾವ ತಿಂಗಳಲ್ಲಿ ಗರ್ಭಿಣಿ ಆಗಿದ್ದೆ ಎಂದು ನೆನಪಿಲ್ಲ. ನಾನು ಯಾವ ತಿಂಗಳಲ್ಲಿ ಚೆಕಪ್‌ಗೆ ಆಸ್ಪತ್ರೆಗೆ ಹೋಗಿದ್ದೆ ಎಂದು ನೆನಪಿಲ್ಲ. ಎದುರುದಾರ ಮೈಸೂರಿನಲ್ಲಿ ಉದ್ಯೋಗದಲ್ಲಿ 15 ದಿನಕ್ಕೊಮ್ಮೆ ಬರಲು ಆಗುವುದಿಲ್ಲ ಎಂದರೆ ಸರಿ. ಮೈಸೂರಿನಿಂದ ಕುಂದಾಪುರಕ್ಕೆ ಬರಲು ಸಾವಿರಾರು ರೂಪಾಯಿ ಖರ್ಚಾಗುತ್ತದೆ ಎಂದರೆ ಸರಿ. ಎದುರುದಾರರಿಗೆ ಬಂದು ಹೋಗಿ ಮಾಡುವಷ್ಟು ಆದಾಯ ಇರಲಿಲ್ಲ ಎಂದರೆ ಸಾಕ್ಷಿ ಅವರಿಗೆ ದುಡಿಮೆ ಚೆನ್ನಾಗಿತ್ತು ಎಂದುನುಡಿದಿರುತ್ತಾರೆ.

ಎದುರುದಾರ ನನ್ನ ದೈಹಿಕ ಸಂಪರ್ಕಕ್ಕೆ ಬಂದಿಲ್ಲ ಎಂದರೆ ಸರಿಯಲ್ಲ. ನನಗೆ 9 ತಿಂಗಳು ಆಗುವರೆಗೂ ಚೆನ್ನಾಗಿ ನೋಡಿಕೊಂಡಿದ್ದರು, ನನಗೆ ಹೆಣ್ಣು ಮಗು ಜನಿಸಿದ ನಂತರ ನನ್ನನ್ನು ಚೆನ್ನಾಗಿ ನೋಡಿಕೊಳ್ಳುತ್ತಿಲ್ಲ ಎಂದು ನುಡಿದಿರುತ್ತಾರೆ. 2 ನೇ ಅರ್ಜಿದಾರರು ಎದುರುದಾರರಿಗೆ ಜನಿಸಿಲ್ಲ ಎಂದರೆ ಸಾಕ್ಷಿ ಜೀವನಾಂಶ

ಕೊಡಬೇಕಾಗುತ್ತದೆ ಎಂದು ಆ ರೀತಿ ಸುಳ್ಳು ಹೇಳುತ್ತಿದ್ದಾರೆ ಎಂದು ನುಡಿದಿರುತ್ತಾರೆ. ನಾನು ವೈದ್ಯಕೀಯ ತಪಾಸಣೆಗೆ ಒಳಪಡಲು ತಕರಾರು ಇಲ್ಲವಾ ಎಂದರೆ ಸಾಕ್ಷಿ ನನ್ನ ಅಭ್ಯಂತರ ಇರುವುದಿಲ್ಲ, ಆದರೆ ವೈದ್ಯಕೀಯ ತಪಾಸಣೆ ನಂತರ ಮಗು ಅವರದ್ದೆ ಎಂದು ಕಂಡು ಬಂದಲ್ಲಿ ಅವರು ನನ್ನ ಮಗುವಿಗೆ ಅರ್ಧ ಆಸ್ತಿ ಕೊಡಲು ಒಪ್ಪಿ ಕೊಳ್ಳಬೇಕು ಎಂದು ನುಡಿದಿರುತ್ತಾರೆ. ಎರಡನೇ ಅರ್ಜಿದಾರರಿಗೆ ಎದುರುದಾರ ಬಯೋಲೋಜಿಕಲ್ ತಂದೆ ಅಲ್ಲ ಎಂದರೆ ಸರಿಯಲ್ಲ.

ಎದುರುದಾರ ಮೈಸೂರಿನಲ್ಲಿ ಕ್ಯಾಂಟೀನ್ ನಡೆಸುತ್ತಿಲ್ಲ ಎಂದರೆ ಸಾಕ್ಷಿ ನನ್ನನ್ನು ಮದುವೆ ಆಗುವಾಗ ಹೇಳಿದ್ದರು, ಅದನ್ನೇ ಹೇಳಿರುವುದಾಗಿ ನುಡಿದಿರುತ್ತಾರೆ. ಎದುರುದಾರ ಮೈಸೂರಿನಲ್ಲಿ ಕ್ಯಾಂಟೀನ್ ನಡೆಸುತ್ತಿದ್ದರು ಎಂಬ ಬಗ್ಗೆ ನನ್ನ ಬಳಿ ಯಾವುದೇ ದಾಖಲೆ ಇರುವುದಿಲ್ಲ. ಎದುರುದಾರರಿಗೆ ಅಕ್ಕ ಇದ್ದಾರೆ ಎಂದರೆ ಸರಿ. ನಾಯರಿ ಕುಟುಂಬದವರು ಅಳಿಯ ಸಂತಾನ ಆಚರಿಸುತ್ತಾರೆ ಎಂದರೆ ಸರಿ, ಸಾಕ್ಷಿ ಮುಂದುವರಿದು ಮದುವೆ ಆಗುವಾಗ ಹೇಳಿಲ್ಲ ಎಂದು ನುಡಿದಿರುತ್ತಾರೆ. ಅಳಿಯ ಸಂತಾನದಲ್ಲಿ ಹೆಣ್ಣು ಮಕ್ಕಳು ತಾಯಿಯ ಮನೆಯಲ್ಲಿ ಇದ್ದು ಸಂಸಾರ ನಡೆಸಬೇಕು ಎಂದರೆ ಸರಿ.

ಎದುರುದಾರರ ಅಕ್ಕ ಬ್ರಹ್ಮಾವರದ ಚಿತ್ರಪಾಡಿಯಲ್ಲಿ ವಾಸವಾಗಿದ್ದಾರೆ, ಅವರಿಗೆ ಇಬ್ಬರು ಮಕ್ಕಳು ಇದ್ದಾರೆ ಎಂದರೆ ಸರಿ, ಸಾಕ್ಷಿ ಮುಂದುವರಿದು ಮದುವೆ ಮಾತುಕತೆ ಸಮಯದಲ್ಲಿ ಎದುರುದಾರರ ಅಕ್ಕ ಮನೆಯಲ್ಲಿ ಇರುವುದು ಹೇಳಿಲ್ಲ ಎಂದು ನುಡಿದಿರುತ್ತಾರೆ. ಎದುರುದಾರರ ಅಕ್ಕನ ಗಂಡ ಎಲ್ಲಿ ಕೆಲಸ ಮಾಡಿಕೊಂಡಿದ್ದಾರೆ ಎಂದು ಗೊತ್ತಿಲ್ಲ. ಎದುರುದಾರರ ಅಕ್ಕ ಅವರ ಗಂಡ ಅವರನ್ನು ಬಿಟ್ಟು ಹೋಗಿರುವುದಾಗಿ ಹೇಳಿರುತ್ತಾರೆ. ಎದುರುದಾರರ ಅಕ್ಕನ ಗಂಡ ಬಿಟ್ಟು ಹೋಗಿರುವ ವಿಚಾರ ವಕೀಲರಿಗೆ ಹೇಳಿದ್ದೀರಾ ಎಂದರೆ ನೆನಪಿಲ್ಲ. ಈಗ ಎದುರುದಾರ ಎಲ್ಲಿ ಕೆಲಸ ಮಾಡಿಕೊಂಡಿದ್ದಾರೆ ಎಂದು ಗೊತ್ತಿಲ್ಲ.

ಎದುರುದಾರರ ಅಕ್ಕ ನನಗೆ ಹಿಂಸೆ ನೀಡಿದ್ದ ಬಗ್ಗೆ ದೂರು ಕೊಡಲು ತೊಂದರೆ ಇಲ್ಲ. ನನಗೆ ದೂರು ಕೊಡಲು ಯಾರಾದರೂ ಅಡ್ಡಿ ಪಡಿಸಿದ್ದರಾ ಎಂದರೆ ನನ್ನ ತಾಯಿ ಮರ್ಯಾದೆ ಹೋಗುತ್ತದೆ, ದೂರು ಕೊಡಬೇಡ ಎಂದು ಹೇಳಿದ್ದರು ಎಂದು ನುಡಿದಿರುತ್ತಾರೆ. ನಾನಾಗಿಯೇ ಎದುರುದಾರರನ್ನು ಬಿಟ್ಟು ಹೋಗಿ ಎದುರುದಾರ ಮತ್ತು ಅವರ ಅಕ್ಕನ ಮೇಲೆ ಸುಳ್ಳು ಆರೋಪ ಮಾಡುತ್ತಿದ್ದೇನೆ ಎಂದರೆ ಸಾಕ್ಷಿ ಅವರೇ ಮನೆಯಿಂದ ನನ್ನನ್ನು ಹೊರಹಾಕಿರುವುದಾಗಿ ನುಡಿದಿರುತ್ತಾರೆ. ಅರ್ಜಿ ಸಲ್ಲಿಸುವ ಸಮಯದಲ್ಲಿ ನನ್ನ ವಕೀಲರಿಗೆ ಎದುರುದಾರ ಮತ್ತು ಅವರ ಅಕ್ಕ ನನ್ನನ್ನು ಹೊರ ಹಾಕಿರುವುದಾಗಿ ಮಾಹಿತಿ ನೀಡಿರುತ್ತೇನೆ. ನನ್ನ ಮನೆಯವರ

ಮೇಲೆ ನನಗೆ ವ್ಯಾಮೋಹ ಜಾಸ್ತಿ ಇದ್ದು, ಹೆಚ್ಚಾಗಿ ಅಲ್ಲಿಯೇ ವಾಸಮಾಡುತ್ತಿದ್ದೆ ಎಂದರೆ ಸರಿಯಲ್ಲ.

ಡೆಲಿವರಿ ನಂತರ ನನ್ನ ತಾಯಿ ನನ್ನನ್ನು ಗಂಡನ ಮನೆಗೆ ಕರೆದುಕೊಂಡು ಬಿಟ್ಟಿರುತ್ತಾರೆ, ಎದುರುದಾರ ನನಗೆ ಕಿರುಕುಳ ನೀಡಿ ಮನೆಯಿಂದ ಹೊರಗೆ ಹಾಕಿರುತ್ತಾರೆ. ಈ ವಿಚಾರವನ್ನು ನನ್ನ ವಕೀಲರಿಗೆ ಮಾಹಿತಿ ನೀಡಿರುತ್ತೇನೆ. ನನಗೆ ಎದುರುದಾರ ಮೇಲೆ ಪ್ರೀತಿ ವಿಶ್ವಾಸ ಇಲ್ಲ, ನಾನಾಗಿಯೇ ಎದುರುದಾರರ ಮನೆಯಿಂದ ಹೊರಟು ಹೋಗಿರುತ್ತೇನೆ ಎಂದರೆ ಸರಿಯಲ್ಲ. ನಾನು ಕೆಲವು ದಿನಗಳು ಮಾತ್ರ ಗಂಡನ ಮನೆಯಲ್ಲಿ ಇದ್ದುದರಿಂದ ಆ ರೀತಿ ಯಾವುದೇ ತೊಂದರೆ ನೀಡಿಲ್ಲ ಎಂದರೆ ಸರಿಯಲ್ಲ. ನಾನೇ ಗಲಾಟೆ ಮಾಡಿ ಗಂಡನ ಮನೆಯವರಿಗೆ ತೊಂದರೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ನನ್ನಿಂದಲೇ ಎದುರುದಾರರಿಗೆ ಮಾನಸಿಕ ತೊಂದರೆ ಆಗಿದೆ ಎಂದರೆ ಸರಿಯಲ್ಲ. ನಾನು ನನ್ನ ತಾಯಿಯ ಮನೆಯಲ್ಲಿ ಉಳಿದುಕೊಂಡಾಗ ಎದುರುದಾರ ನನ್ನನ್ನು ಕರೆಯಲು ಬಂದಿದ್ದರು ಎಂದರೆ ಸರಿಯಲ್ಲ.

ಡೆಲಿವರಿ ಆದಾಗ ಆ ವಿಚಾರವನ್ನು ಎದುರದಾರರಿಗೆ ತಿಳಿಸಿಲ್ಲ ಎಂದರೆ ಸಾಕ್ಷಿ ಎದುರುದಾರರಿಗೆ ತಿಳಿಸಿದ್ದು, ಅವರು ಪುರುಸೊತ್ತಿಲ್ಲ ಎಂದು ಹೇಳಿರುವುದಾಗಿ ನುಡಿದಿರುತ್ತಾರೆ. ಎದುರುದಾರ ನನ್ನನ್ನು ವಿಚ್ಚೇದನಾ ಕೊಡಿ ಎಂದು ಕೇಳಿಲ್ಲ. ನನ್ನ ಮಗಳು ಹುಟ್ಟಿದ ನಂತರ ಹೆಣ್ಣು ಮಗು ಆಗಿದೆ ಎಂದು ನನ್ನನ್ನು ಕೀಳಾಗಿ ನೋಡಿರುತ್ತಾರೆ. ಮದುವೆ ನಂತರ ಹೆಂಡತಿಯಾಗಿ ನನ್ನ ಕರ್ತವ್ಯವನ್ನು ಎಂದೂ ನಿರ್ವಹಿಸಿಲ್ಲ ಎಂದರೆ ಸರಿಯಲ್ಲ. ನನಗೆ ಹೆರಿಗೆ ಆಗುವವರೆಗೆ ಎದುರುದಾರ ನನ್ನನ್ನು ಚೆನ್ನಾಗಿ ನೋಡಿಕೊಂಡಿರುತ್ತಾರೆ. ಹೆರಿಗೆ ನಂತರ ನಾನು ನನ್ನ ಗಂಡನ ಮನೆಗೆ ಬಂದಿಲ್ಲ ಎಂದರೆ ಸರಿಯಲ್ಲ.

ನನಗೆ ಎದುರುದಾರರು ಮದುವೆ ಸಮಯದಲ್ಲಿ ನನಗೆ ಹೇಳಿದ ಆದಾರದ ಮೇಲೆ ಅವರಿಗೆ ಜಮೀನು ಇರುವುದಾಗಿ ಹೇಳಿರುತ್ತೇನೆ. ಎದುರುದಾರರ ಹೆಸರಿನಲ್ಲಿ ಆಸ್ತಿ ಇರುವ ಬಗ್ಗೆ ದಾಖಲೆ ಹಾಜರು ಪಡಿಸಲು ಸಾಧ್ ಇಲ್ಲ. ಎದುರುದಾರರ ಹೆಸರಿನಲ್ಲಿ ಯಾವುದೇ ಆಸ್ತಿ ಇಲ್ಲ ಎಂದರೆ ಅವರು ಹೇಳಿರುವುದನ್ನು ನಾನು ಹೇಳಿರುವುದಾಗಿ ನುಡಿದಿರುತ್ತಾರೆ. ನಮ್ಮ ಮನೆಯಲ್ಲಿ ನಾನು, ನನ್ನ ಮಗಳು, ನನ್ನ ತಮ್ಮ, ತಮ್ಮನ ಹೆಂಡತಿ ಮತ್ತು ತಾಯಿ ವಾಸವಾಗಿರುತ್ತಾರೆ. ನನ್ನ ತಮ್ಮ ಮೊದಲು ಗಾರೆ ಕೆಲಸಕ್ಕೆ ಹೋಗುತ್ತಿದ್ದು, ಈಗ ಬಿದ್ದು ಕಾಲು ಪೆಟ್ಟಾಗಿ ಮನೆಯಲ್ಲಿ ಇದ್ದಾನೆ. ನನ್ನ ತಾಯಿ ಈಗ ಮನೆಯಲ್ಲಿ ಇದ್ದಾರೆ, ಅವರು 2 ಧನ ಸಾಕಿಕೊಂಡು ಇದ್ದಾರೆ. ನನ್ನ ತಾಯಿಗೆ ಒಂದುಕಾಲು ಎಕರೆ ಭೂಮಿ ಇರುತ್ತದೆ. ಆ ಆಸ್ತಿಗೆ ನಾವು 4 ಜನ ಹಕ್ಕುದಾರರು ಎಂದರೆ ಸರಿ. ನಾನು ಮನೆಯಲ್ಲಿಯೇ ಇರುತ್ತೇನೆ, ಯಾವುದೇ ಕೆಲಸಕ್ಕೆ ಹೋಗುತ್ತಿಲ್ಲ.

ನನಗೆ ಸಾಕಷ್ಟು ಆದಾಯ ಇದ್ದರೂ ನ್ಯಾಯಲಯದ ಮುಂದೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನನ್ನು ಮತ್ತು ನನ್ನ ಮಗಳನ್ನು ನೋಡಿಕೊಳ್ಳುವಷ್ಟು ಆದಾಯ ನನಗೆ ಇದೆ ಎಂದರೆ ಸರಿಯಲ್ಲ. ನನ್ನ ಮತ್ತು ನನ್ನ ಮಗುವಿನ ಜೀವನಾಂಶಕ್ಕೆ ಎದುರುದಾರರನ್ನು ಕೇಳುವ ಅಗತ್ಯ ಇಲ್ಲ, ನನಗೆ ಸಾಕಷ್ಟು ಆದಾಯ ಇದೆ ಎಂದರೆ ಸರಿಯಲ್ಲ. ಎದುರುದಾರರಿಂದ ಯಾವುದೇ ಜೀವನಾಂಶ ಕೇಳುವ ಹಕ್ಕು ನನಗೆ ಇಲ್ಲ ಎಂದರೆ ಸರಿಯಲ್ಲ. ಅರ್ಜಿಯಲ್ಲಿ ಕೇಳಿರುವ ಪರಿಹಾರ ಪಡೆಯಲು ನಾನು ಅರ್ಹಳಲ್ಲ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ

ಓದಿ ಹೇ. ಕೇ. ಸರಿ ಇದೆ.

ನನ್ನ ಹೇ. ಮೇ. ಬೆ. ಮಾಡಲಾಗಿದೆ

2 ನೇ ಹೆಚ್ಚುವರಿ ಸಿವಿಲ್ ನ್ಯಾಯಾದೀಶರು
ಮತ್ತು ಜೆ.ಎಂ.ಎಫ್.ಸಿ. ಕುಂದಾಪುರ